ಬಸ್ಸನ್ನು (ಲೈಲ್ಯಾಂಡ್) ದುರಸ್ತಿ ಮಾಡಲಾಗಿಲ್ಲ. ಇಂಜಿನ್‌ನ ವಿವರವಾದ ಪರಿಶೀಲನೆಯ ನಂತರ ಅದನ್ನು ಬದಲಾಯಿಸಬೇಕೆಂದು ನಿರ್ಧರಿಸಲಾಯಿತು. ಸದರೀ ಬಸ್ಸಿಗೆ (ಹಿನೋ) ಇಂಜಿನ ಅಳವಡಿಸಿರುವುದರಿಂದ ಅದನ್ನು ಬದಲಾಯಿಸಲು ಬೆಂಗಳೂರಿಗೆ ತರಬೇಕಾಯಿತು. ದಿನಾಂಕ 2-3-93 ರಂದು ಆ ಬಸ್ಸನ್ನು ಬೆಂಗಳೂರಿಗೆ ತರಲಾಯಿತು. ಪ್ರಾದೇಶಿಕ ಕಾರ್ಯಾಗಾರದಲ್ಲಿ ಇಂಜಿನನ್ನು ದಿನಾಂಕ 3-3-93 ರಂದು ಬದಲಾಯಿಸಿ ಬಸ್ಸನ್ನು ದಿನಾಂಕ 5-3-93 ರಿಂದ ಸಂಚಾರಕ್ಕೆ ಬಿಡಲಾಯಿತು.

ಬೆಳಗಾವಿ ವಿಭಾಗದಲ್ಲಿ ಒಟ್ಟು 10 ಸುಖಾಸೀನ ಅನುಸೂಚಿಗಳಿದ್ದು ಅವುಗಳ ಸಂಚಾರಕ್ಕಾಗಿ 10 ಸುಖಾಸೀನ ಬಸ್ಸುಗಳು ಮಾತ್ರ ಇರುವುದರಿಂದ ಕೆಟ್ಟಿರುವ ಬಸ್ಸಿಗೆ ಬದಲಿ ಸುಖಾಸೀನ ಬಸ್ಸನ್ನು ಬೆಳಗಾವಿನಿಂದ ಕೊಡಲು ಸಾಧ್ಯವಾಗಿಲ್ಲ.

ಹಾಲೀ ಬೈಲಹೊಂಗಲ ಘಟಕ 90 ಅನುಸೂಚಿಗಳನ್ನು ಓಡಿಸಲು 96 ಬಸ್ಸುಗಳನ್ನು ಹೊಂದಿದೆ. ಅವುಗಳಲ್ಲಿ 20 ಬಸ್ಸುಗಳು ಈಗಾಗಲೇ 7 ಲಕ್ಷ ಕಿ.ಮೀ ದೂರವನ್ನು ಕ್ರಮಿಸಿರುವುದರಿಂದ ಅವುಗಳ ಕವಚ ಮತ್ತು ಯಾಂತ್ರಿಕ ಪರಿಸ್ಥಿತಿಯನ್ನು ಪರೀಕ್ಷಿಸಿ ನಿಷ್ಕ್ರಿಯೆಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಪ್ರಸ್ತುತ ಆರ್ಥಿಕ ವರ್ಷಗಳಲ್ಲಿ ಅಂದರೆ 1992-93 ರಲ್ಲಿ (ಫೆಬ್ರವರಿ ವರೆಗೆ) 25 ಹೊಸ ಬಸ್ಸುಗಳನ್ನು ಬೈಲಹೊಂಗಲ ಘಟಕಕ್ಕೆ ಒದಗಿಸಲಾಗಿದೆ. ಕಳೆದ 6 ತಿಂಗಳುಗಳಲ್ಲಿ ಸದರೀ ಘಟಕಕ್ಕೆ ಸೇರಿದ ಬಸ್ಸುಗಳು ಪ್ರತಿ ತಿಂಗಳು ಮಾರ್ಗದ ಮದ್ಯೆ ಕೆಟ್ಟು ನಿಂತ ಪ್ರಕರಣಗಳ ಸರಾಸರಿ ಸಂಖ್ಯೆ 25. ವಾಹನಗಳ ದುರಸ್ತಿಯನ್ನು ಉತ್ತಮಪಡಿಸಲು ಕ್ರಮ ಕೈಗೊಳ್ಳಲಾಗುವುದು. ಘಟಕ ವ್ಯವಸ್ಥಾಪಕರ ಕಾರ್ಯದಕ್ಷತೆಯನ್ನು ಸುದಾರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

8. ಮಲಪ್ರಭ ಎರಡನೆಯ ಹಂತದ ಯೋಜನೆಯಿಂದ ಹುಬ್ಬಳ್ಳಿ-ಧಾರವಾಡ ನಗರಗಳಿಗೆ ನೀರು ಸರಬರಾಜು.

ಶ್ರೀ ಎ.ಎಂ. ಹಿಂಡಸಗೇರಿ (ಹುಬ್ಬಳ್ಳಿ) : ಹುಬ್ಬಳ್ಳಿ - ಧಾರವಾಡ ಮಹಾನಗರಕ್ಕೆ ಮೂರು ಕಡೆಯಿಂದ ಅಂದರೆ 1) ನೀರಸಾಗರ ದುಮ್ಮವಾಸ ಕೆರೆ . 2) ಉಣಕಲ್ಲ ಕೆರೆ ಹಾಗೂ 3) ಮಲಪ್ರಭಾ ನದಿಯಿಂದ ಜಲ ಮಂಡಳಿಯವರು ತಂದ ನೀರನ್ನು ಮಹಾನಗರ ಸಭೆಯವರು ಎರಡು ದಿವಸಕ್ಕೆ ಒಂದಾವರ್ತಿ ಸಾರ್ವಜನಿಕರಿಗೆ ಸರಬರಾಜು ಮಾಡಲಾಗುತ್ತಿದೆ. ಮಲಪ್ರಭಾ ಎರಡನೆಯ ಹಂತದ ಕಾರ್ಯವನ್ನು 1990 ರಲ್ಲಿ ಪ್ರಾರಂಭಿಸಿ, 1991 ರಲ್ಲಿ ಪೂರ್ಣಗೊಳಿಸಿ, ಅವಳಿ ನಗರಗಳಿಗೆ ಪ್ರತಿ ದಿವಸ ನೀರು ಸರಬರಾಜು ಮಾಡಲಾಗುವುದೆಂದು ಸರಕಾರ ಹಾಗೂ ಜಲ ಮಂಡಳಿ ವತಿಯಿಂದ ಮಹಾನಗರದ ಜನತೆಗೆ ಆಶ್ವಾಸನೆ ನೀಡಲಾಗಿತ್ತು. ಆದರೆ ಈ ವರೆಗೂ ಮಲಪ್ರಭಾ ಎರಡನೆ ಹಂತದ ಯೋಜನೆಯನ್ನು ಪೂರ್ಣಗೊಳಿಸಲಾಗಿಲ್ಲ. ಇದರಿಂದ ಮಹಾನಗರದ ಜನತೆಗೆ ನೀರಿನ ಅಭಾವವಾಗಿ ತುಂಬಾ ತೊಂದರೆಯಾಗುತ್ತಾ ಇದೆ. ಕಾರಣ ಸದರಿ ಯೋಜನೆಯನ್ನು ಪೂರ್ಣಗೊಳಿಸುವ ನಿಗದಿತ ಸಮಯವನ್ನು ತಿಳಿಯಲು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಅಲ್ಲದೇ ಸಾರ್ವಜನಿಕರಿಗೆ ನೀರು ಪೂರೈಸುವ ಈಗಿನ ವ್ಯವಸ್ಥೆಯನ್ನು ಮಹಾನಗರ ಸಭೆಯಿಂದ ಜಲ ಮಂಡಳಿಯವರಿಗೆ ಹಸ್ತಾಂತರಗೊಳಿಸುವ ಪ್ರಯತ್ನ ಇದೆ ಎಂದು ನನಗೆ ತಿಳಿದು ಬಂದಿದೆ. ಇದು ನಿಜವೆ? ಇದು ನಿಜವಾಗಿದ್ದರೆ ಹಾಗೆ ಮಾಡಬಾರದೆಂದು ತಮ್ಮ ಮುಖಾಂತರ ಸರಕಾರಕ್ಕೆ ಒತ್ತಾಯಿಸುತ್ತೇನೆ.

ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮುಖ್ಯ ಅಧ್ಯಕ್ಷರೆ, ಮಾನ್ಯ ನಗರಾಭಿವೃದ್ಧಿ ಸಚಿವರ ಪರವಾಗಿ ಈ ಹೇಳಿಕೆಯನ್ನು ಕೊಡುತ್ತಿದ್ದೇನೆ. ಹುಬ್ಬಳ್ಳಿ - ಧಾರವಾಡ ಮಹಾನಗರಕ್ಕೆ ಮೂರು ಜಲ ಮೂಲಗಳಿಂದ ಅಂದರೆ

ಮಲಪ್ರಭಾ ಜಲಾಶಯದಿಂದ 75 ಲಕ್ಷ ಗ್ಯಾಲನ್, ನೀರಸಾಗರ ಜಲಾಶಯದಿಂದ 80 ಲಕ್ಷ ಗ್ಯಾಲನ್ ನೀರನ್ನು ದಿನಂಪ್ರತಿ ಜಲಮಂಡಳಿಯು ಮಹಾನಗರ ಪಾಲಿಕೆಗೆ ಒಟ್ಟಾರೆ ಆಧಾರದ ಮೇಲೆ (ಬಲ್ಕ್ ಸಪ್ಲೈ) ಸರಬರಾಜು ಮಾಡಲಾಗುತ್ತಿದೆ. ಹಾಗೆಯೇ ಉನಕಲ್ ಜಲಾಶಯದಿಂದ ಮಹಾನಗರ ಪಾಲಿಕೆಯು 10 ಲಕ್ಷ ಗ್ಯಾಲನ್ ನೀರನ್ನು ಪಡೆಯುತ್ತಿದ್ದಾರೆ. ಜನತೆಗೆ ನೀರಿನ ವಿತರಣಾ ವ್ಯವಸ್ಥೆಯನ್ನು ಮಹಾನಗರಪಾಲಿಕೆಯವರು ನಿರ್ವಹಿಸುತ್ತಾರೆ. ಹೀಗೆ ಸರಬರಾಜು ಮಾಡುವ ಒಟ್ಟು ಪ್ರಮಾಣ 165 ಲಕ್ಷ ಗ್ಯಾಲನ್ ನೀರು ಆಗಿನ ಜನಸಂಖ್ಯೆಯಾದ 7.00 ಲಕ್ಷಗಳಿಗೆ ತಲಾ ದಿನಂಪ್ರತಿ 23 ಗ್ಯಾಲನ್‌ನಂತೆ ದೊರೆತಂತಾಗುತ್ತದೆ. ಆದರೆ ವಿತರಣಾ ವ್ಯವಸ್ಥೆಯಲ್ಲಿ ಸುಧಾರಣಾ ಕಾರ್ಯಗಳು ಆಗಬೇಕಿಂದಿರುವುದರಿಂದ ಮಹಾನಗರ ಪಾಲಿಕೆಯು ಎರಡು ದಿನಗಳಿಗೆ ಒಂದಾವರ್ತಿ ನೀರು ಸರಬರಾಜು ಮಾಡುತ್ತಿದ್ದಾರೆ.

ಮಲಪ್ರಭಾ ಎರಡನೇ ಹಂತದ ಯೋಜನೆ 650 ಲಕ್ಷ ರೂ. ಗಳಿಗೆ ದಿನಾಂಕ : 10-4-90 ರಲ್ಲಿ ಮಂಜೂರಾಯಿತು. ಈ ಯೋಜನೆಗೆ 55 ಲಕ್ಷ ರೂ. ಗಳು ಹುಡ್ಕೊ ವತಿಯಿಂದ ಸಾಲವಾಗಿ ಬರಬೇಕು. ಈ ಸಾಲ ಬಿಡುಗಡೆಗೆ ಮಹಾನಗರ ಪಾಲಿಕೆಯು ನೀರಿನ ದರವನ್ನು ಹೆಚ್ಚಿಸುವ ಬಗ್ಗೆ ಒಂದು ಠರಾವನ್ನು ಕೊಟ್ಟಿತು. ಆದ್ದರಿಂದ ಸಾಲದ ಮೊದಲ ಕಂತನ್ನು ಸೆಪ್ಟೆಂಬರ್ 92 ರಲ್ಲಿ ತನ್ನ ಠರಾವನ್ನು ಕೊಟ್ಟಿತು. ಆದ್ದರಿಂದ ಸಾಲದ ಮೊದಲ ಕಂತನ್ನು ಜನವರಿ 93ರಲ್ಲಿ ಪಡೆಯಲಾಯಿತು. ಆದ್ದರಿಂದ ಈ ಯೋಜನೆಯ ಪ್ರಗತಿಯು ಕುಂಟಿತಗೊಂಡಿತು. ಈ ಯೋಜನೆಯ ಕೆಲಸವು ಈಗ ಶೀಘ್ರ ಪ್ರಗತಿಯಲ್ಲಿ ಇದ್ದು ಮಾರ್ಚ್ 1993 ರ ಅಂತ್ಯದ ವೇಳೆಗೆ ಚಾಲೂ (ಕಮಿಷನ್) ಮಾಡಲಾಗುವುದು. ಹಾಗೂ ಪೂರ್ಣವಾಗಿ ಕೆಲಸಗಳನ್ನು ಡಿಸೆಂಬರ್ 1993 ರ ವೇಳೆಗೆ ಪೂರ್ಮೆಸಲಾಗುವುದು.

ಹುಬ್ಬಳ್ಳಿ - ಧಾರವಾಡ ನಗರ ನೀರು ಸರಬರಾಜು ಯೋಜನೆಯನ್ನು ಮಂಡಳಿಯು (ಬಲ್ಕ್ ಸಪ್ಲೈ) ಮಾಡುವ ಹಂತದವರೆಗೆ ನಿರ್ವಹಿಸುತ್ತಿದೆ. ನಗರದಲ್ಲಿ ನೀರಿನ ವಿತರಣಾ ವ್ಯವಸ್ಥೆಯನ್ನು ಮಹಾನಗರ ಪಾಲಿಕೆಯವರು ನಿರ್ವಹಿಸುತ್ತಿದ್ದಾರೆ. ಒಂದು ಲಕ್ಷ ಜನ ಸಂಖ್ಯೆಹಚ್ಚಿರುವ ನಗರ ಪ್ರದೇಶಗಳಲ್ಲಿ ಪೂರ್ಣ ನಿರ್ವಹಣೆಯನ್ನು ಜಲಮಂಡಳಿಯು ನಿರ್ವಹಿಸಬೇಕೆಂಬ ಬಗ್ಗೆ ಸರ್ಕಾರ ಯೋಜಿಸುತ್ತದೆ. ಇದರ ಬಗ್ಗೆ ಮಹಾನಗರ ಪಾಲಿಕೆ ಮತ್ತು ಜಲಮಂಡಳಿಯವರೊಂದಿಗೆ ದೀರ್ಘವಾಗಿ ಚರ್ಚಿಸಿ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.